ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—ಯಾರುನ್ನೂ ಹಾಜರಾಗಲಿಲ್ಲಾ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹೆಕ್ಕ ಜವುಜಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾಪವೆನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರಿ 21ನೇ ತಾರೀಖಿನಲ್ಲಿ ಈ ಕೋರ್ಟುಮೊಹರ್ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ದೇಣೆ ಉಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಂತಾಮಣೀಲಿ ಯಿರತಕ್ಕ ಕೊಮರ್ಲ ವೆಂಕಟೇಶಯ್ಯ ..	114	0	0	ಅಪೀಲ್ ನಿವರಿಸಿ ಇಪ್ಪತ್ತೆರಡನೇ ಜನವರಿ ೧೮೯೦	ಕಾಲಂನಲ್ಲಿ ಹೇಳಿರುವ ಪ್ರಕಾರ ಸದರೀ ಪ್ರತಿವಾದಿಗಳ ಸ್ವಾಧೀನದಲ್ಲಿರುವ ಸ್ಥಿರಾಸ್ತಿ.	
2	ಡಿಟೋ ಈಪ್ಪಲಮಡಗು ಲಕ್ಷ್ಮಯ್ಯ ..	50	0	0			
3	ಚೇಗು ಮುನಿರಾಮಯ್ಯ ಚಿಂತಾಮಣಿ ..	20	0	0			
4	ಪೋಲೇಟಿ ಸೀನಯ್ಯ ಡಿಟೋ ..	16	0	0			
5	ಚಿಂತಾಮಣಿ ತಾಲ್ಲೂಕು ದೇವನಪಲ್ಲೀಲಿರುವ ಚಿನ್ನಪ್ಪ ..	150	0	0			
6	ಚಿಂತಾಮಣಿಗೆ ಕೇರಿದ ತಿಮ್ಮಸಂದ್ರದಲ್ಲಿರತಕ್ಕ ದಾಸಪ್ಪ ..	30	0	0			
7	ಡಿಟೋ ಗ್ರಾಮದಲ್ಲಿರುವ ರಾಮಂಣ ..	20	0	0			
8	ಚಿಂತಾಮಣಿ ತಾಲ್ಲೂಕು ಬೈಲಪಲ್ಲಿ ಕದರಪ್ಪ ..	50	0	0			
9	ಡಿಟೋ ಗ್ರಾಮದಲ್ಲಿರುವ ಚಿನ್ನಪ್ಪ ..	50	0	0			
	ಜುಮ್ಲಾ ..	500	0	0			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಪ್ಯಾರ್ಟೀಷನ್ ಆಫೀಸ್.

23ನೇ ಮಾಹೆ ಮೇ 1890ನೇ ಇಸವಿ.

ಇಸ್ತಿಹಾರ್ನಾಮೆ.

ಹೊನ್ನವಳ್ಳಿ ಪ್ಯಾರ್ಟೀಷನ್ ವಾಜಿಬರಾಗಿ ಯಿದ್ದು ಹಾಲಿ ಮೃತಪಟ್ಟು ಯಿರುವ ಶೇಷ ಯಂಬುವನಿಗೆ ಸದರೀಯವನು ಸದರೀ ಪ್ಯಾರ್ಟೀಷನಿನಲ್ಲಿ ಕಾವುಗಾರಿ ಮಾಡಿಸಿದ್ದಕ್ಕಾಗಿ (83—5—6) ರೂಪಾಯಿಗಳು ಸಲ್ಲಬೇಕಾಗಿ ಯಿದೆ. ಈ ಮೊಬಲಗ್ಯೆ ಬಾಧ್ಯತೆವುಳ್ಳ ಜನಗಳು ಈ ತಾರೀಖು ಲಾಗಾಯತು ಆರು ತಿಂಗಳ ವಳಗಾಗಿ ಹಕ್ಕುದಾರಿ ಸರಟಿಫಿಕೇಟು ನೊಡನೆ ನಮ್ಮ ಆಫಿಸಿಗೆ ಅರ್ಜೀಬರದು ಕೊಳ್ಳಬೇಕು, ಈ ವಾಯಿದೆ ಪೂರೈಸಿದನಂತರ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುತ್ತೆ. ನಂತರ ಯಾವ ಹಕ್ಕುದಾರಿಯನ್ನೂ ಮಂಜೂರ್ಮಾಡುವದಿಲ್ಲ.

ಯಸ್. ಬಾಪೂರಾವ್,
ಸಬ್ ಅಸಿಸ್ಟೆಂಟ್ ಕಂಸರ್ವೇಟರ್ ಪ್ಯಾರ್ಟೀಷನ್.

ಪ್ರಕಟನೆ.

ತಾರೀಖು 30ನೇ ಏಪ್ರೆಲ್ 1890.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖು ವರಿಗೆ ಹಿಡಿಯಲ್ಪಡುವ ಆನೆಗಳು ಸಹ 1890ನೇ ಇಸವಿ ಜೂ೯ ತಾರೀಖು 16ರಲ್ಲು ಮೈಸೂರಿನಿಂದ 20 ಮೈಲಿ ಛಾಸಲೆಯಲ್ಲಿ ಯಿರುವ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಮೊ ಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕ೯ಸರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಹೆಸರು.	ಜಾತಿ.	ಯತ್ತರ ಅಡಿ	ಅಂಗುಲ.	ಹಿಡಿದ ತಾರೀಖು.	ಷರಾ.
1	ನರಸುಹ್ಮ ..	ಗಂಡು	6	6	21—2—90	
2	ಚಂದ್ರಶೇಖರ ..	ಡಿಟೋ	4	9	14—3—90	
3	ವರಲಕ್ಷ್ಮಿ ..	ಹೆಣ್ಣು	6	0	ಡಿಟೋ	
4	ಗಜಲಕ್ಷ್ಮಿ ..	ಡಿಟೋ	7	6	ಡಿಟೋ	

ಷರತ್ತುಗಳು—ಸರ್ಕಾರದ ಹರಾಜ್ ಖೈದಾದ ಕೂಡ್ಲೆ ಚಡ ದರಖಾಸ್ತುದಾರನು ಹರಾಜು ಮೊಬಲಗಿನ ಮೇಲೆ ಶೇಕದಾ 25 ರೂ ಪಾಯಿ ಶೇವಣಿಯನ್ನ ಪಾವತಿ ಮಾಡತಕ್ಕದ್ದು, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವ ತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಶೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲಾ ಗುತ್ತೆ, ಮತ್ತು ಸದರೀ ಆನೆಗಳು ಪುನಹ ಹರಾಜು ಮಾಡುವದರಲ್ಲಿ ವುಂಟಾಗಬಹುದಾದ ನುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ, ನಫೆ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲ. ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾ ಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಬಿ. ರಾಮುಸ್ವಾಮಯ್ಯರ್,
ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕ೯ಸರ್ವೇಟರ್.

ಪ್ರಸಿದ್ಧ ಪತ್ರಿಕೆ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಮಹಾಸ್ವಾಮಿಯವರ ಆಜ್ಞಾನುಸಾರ, ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರಿಂದ ಕರ್ಣಾಟಕ ಭಾಷೆಯಲ್ಲಿ ವಾಕ್ಯರೂಪವಾಗಿ ವಿರಚಿತವಾದ, ಶ್ರೀಕೃಷ್ಣರಾಜ ವಾಣೀವಿಲಾಸನೆಂಬ ಶ್ರೀಮನ್ಮಹಾಭಾರತದ ಕನ್ನಡದ ಟೀಕನ್ನು ಲೋಕೋಪಕಾರಾರ್ಥವಾಗಿರುವಂತೆ, 1884–85ನೇ ಇಸವಿಯಲ್ಲಿ ಮೈಸೂರು ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ವಿರಾಟಪರ್ವವನ್ನೂ ಉದ್ಯೋಗಪರ್ವವನ್ನೂ ಮುದ್ರಿಸಿ ಪ್ರಚಾರಪಡಿಸಿರುವ ವಿಷಯವು ಸರ್ವರಿಗೂ ವಿದಿತವಾಗಿರುವದಷ್ಟೆ.

ಶ್ರೀಮನ್ಮಹಾರಾಜರವರ ಆಜ್ಞೆಯಂ ಪಡೆದು ಉಳಿದಿದ್ದ ಹದಿನಾರು ಪರ್ವಗಳಲ್ಲಿ ಆದಿಪರ್ವವೂ ಸಭಾಪರ್ವವೂ ಬೆಂಗಳೂರಲ್ಲಿರುವ ಚಾಮುಂಡೇಶ್ವರಿ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟು ಈಗ ಕ್ರಯಕ್ಕೆ ಸಿದ್ಧವಾಗಿರುತ್ತದೆ.

ಈಗ ನಮ್ಮಲ್ಲಿ ಕರ್ಣಪರ್ವವು ಮುದ್ರಿಸಲ್ಪಟ್ಟು ಕ್ರಯಕ್ಕೆ ಸಿದ್ಧವಾಗಿರುತ್ತದೆ. ಇದರ ಕ್ರಯವು ಪ್ರತಿ ಒಂದಕ್ಕೆ ರೂಪಾಯಿ 1—12—0, ಟಪಾಲ್ ಹಾಸಲ್ ಸಹಿತ ರೂಪಾಯಿ 2—0—0, ಬೇಕಾದವರು ಈ ಕೆಳಗೆ ರುಜು ಮಾಡಿರುವವರಿಗೆ ಕ್ರಯವನ್ನು ಕಳುಹಿಸಿ ಬರೆದರೆ ಪುಸ್ತಕವು ದೊರಿಯುತ್ತದೆ. ಈಗ ಅರಣ್ಯಪರ್ವವು ಮುದ್ರಣೆಯಲ್ಲಿರುತ್ತದೆ.

ಮೈಸೂರು,
16ನೇ ಏಪ್ರೆಲ್ 1890.

ಬೆ. ಚಿ. ರಾಜಪ್ಪ,
ಮೈಸೂರಲ್ಲಿರುವ ಸರಕಾರದ ಬ್ಯಾಂಕ್ ಮುದ್ರಾಶಾಲೆಯ ಫೋರ್‌ಮ್ಯಾನ್.

ಸ್ವಂತ ಪ್ರಕಟನೆ.

ಹಾಸನ ಟೌನ್ ನೇಟಿವ್ ಧರ್ಮ್ಮಸಮುಜ್ಜೀವಿನೀ ಕಂಪೆನಿ (ಲಿಮಿಟೆಡ್) ಆಫೀಸಿನಿಂದ.

ಸಮಸ್ತರಿಗೂ ತಿಳಿಯಪಡಿಸುವದೇನಂದರೆ.

ಹಾಸನ ಟೌನ್ ನೇಟಿವ್ ಧರ್ಮ್ಮಸಮುಜ್ಜೀವಿನೀ ಕಂಪನಿಯು, ಡಿಟೋ ಕಂಪೆನೀ ಮೆಂಬರುಗಳು ಸ೯ 1890ನೇ ಇಸವಿ ಏಪ್ರೆಲ್ 27ನೇ ತಾರೀಖಿನಲ್ಲಿ ವಿಾಟಿಂಗ್ ಕೇರಿ ಪೈಂಜಪ್ ಮಾಡಬೇಕೆಂದು ಅಬಿಪ್ರಾಯಪಟ್ಟು ಪ್ರೊಸೀಡಿಂಗ್ಸು ಆಗಿ ರಿಜಿಸ್ಟ್ರಾಗಿರುತ್ತೆ. ಡಿಟೋ ಪ್ರೊಸೀಡಿಂಗ್ಸು ಪ್ರಕಾರ ಜಾರೀಲಿತಂದಿರುತ್ತೆ. ತಾರೀಖು 31ನೇ ಮೇ 1890ನೇ ಇಸವಿ.

ಹೆಚ್. ಯ೯. ಕೇಶವಯ್ಯ ಲಿಕ್ವಿಡೇಟರ್.
ಹಾಸನ ಪಿ. ರಂಗಯ್ಯ ಲಿಕ್ವಿಡೇಟರ್.

Mysore Govt. Central Press, Bangalore—1890.